Sri H. M. CHANNABASAPPA (Minister for Public Works and Electricity).—

(1) Lift Irrigation Scheme at Athgur.

There is no proposal.

(2) Lift Irrigation Scheme at Alur :

The proposal is under investigation.

ಶ್ರೀ ಎ. ಡಿ. ಬಿಳಿಗೌಡ.—ಸಾಮಿ, ಅತ್ಕೂರಿನ ಯಾತ ನೀರಾವರಿ ಯೋಜನೆಯ ಬಗ್ಗೆ ಸಲಹೆ ಏನೂ ಇಲ್ಲ ಎಂದು ಹೇಳಿದ್ದೀರಿ, ಬಹಳ ವರ್ಷಗಳಿಂದ ಈ ಪ್ರದೇಶದ ಜನಗಳು ಒಂದೇ ಸಮನಾಗಿ ಮನವಿ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಅದನ್ನು ಆದಷ್ಟು ಬೇಗ ಪರಿಶೀಲನೆ ಮಾಡಿ ಮಾಡಿಸಿ ಕೊಡುತ್ತೀರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಮನವಿ ಮಾಡಿಕೊಳ್ಳುತ್ತಿದ್ದಾರೆ ಎನ್ನುವ ಒಂದು ಕಾರಣದಿಂದಲೇ ಅದನ್ನು ಮಾಡಿಸಿಕೊಡುವುದಕ್ಕಾಗುವುದಿಲ್ಲ.

ಶ್ರೀ ಎ. ಡಿ. ಬಿಳಿಗೌಡ.—ಅದನ್ನು ಲೆಫ್ಟ್ ಬ್ಯಾಂಕ್ ಚಾನಲ್‌ನಿಂದ ಮಾಡುವುದಕ್ಕೆ ಸಾಧ್ಯ ಇದೆ ಎಂದು ಇಂಜಿನಿಯರು ಅಭಿಪ್ರಾಯ ಪಡುತ್ತಾರೆ. ಅದು ಬೆಂಗಾಡು ಪ್ರದೇಶ. ಆದ್ದರಿಂದ ಅತ್ಕೂರು ಲಫ್ಟ್ ಇರಿಗೇಷನ್ ಯೋಜನೆಯನ್ನು ಕಾರ್ಯಗತ ಮಾಡುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೊಳೆಯಿಂದ ನೀರನ್ನು ಎತ್ತಿ ಬಿಡಬಹುದು. ಕಾಲುವೆಯಿಂದ ನೀರನ್ನು ಎತ್ತಿ ಬಿಡುವುದಕ್ಕೆ ಆಗುವುದಿಲ್ಲ.

ಶ್ರೀ ಎ. ಡಿ. ಬಿಳಿಗೌಡ.—ನಾಲೆಯಲ್ಲಿ ಪೇಸ್ಟ್ ಆಗತಕ್ಕಂಥಾ ನೀರನ್ನು ಲಿಫ್ಟ್ ಮಾಡಿ ಅತ್ಕೂರು ಕೆರೆಗೆ ನೀರನ್ನು ಸಪ್ಲೈ ಮಾಡಿದರೆ ಸಾವಿರಾರು ಎಕರೆ ನೀರಿನ ಅನುಕೂಲವಾಗುತ್ತದೆ. ಆದ್ದರಿಂದ ಇದನ್ನು ಕಾರ್ಯಗತ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅತ್ಕೂರು ಕೆರೆ ಆ ಕಾಲುವೆಗಿಂತ 75 ಅಡಿ ಎತ್ತರದಲ್ಲಿದೆ. ಅದು ಎಕನಾಮಿಕ್ ಪ್ರಾಪೋಜಿಷನ್ ಅಲ್ಲ ಎಂದು ಸ್ಪಷ್ಟ ಮಾಡಿದ್ದಾರೆ.

Minor Irrigation and Lift Irrigation Schemes in Gulbarga District

211. Sri BAPUGOWDA (Shahapur).—

Will the Minister for Public Works and Eleciricity be pleased to state :—

(*a*) the number of Minor Irrigation and Lift Irrigation schemes for which survey has been completed and plans and estimates prepared in Gulbarga district ;

(*b*) the number of such works taken up for execution (Talukwise information be furnished) ?

Sri H. M. CHANNABASAPPA (Minister for Public Works and Elictricity).—

(*a*) Surveys have been completed in respect of 74 Minor Irrigation works and 40 Lift Irrigation Schemes. Plans and estimates have been prepared for all the works.

(*b*) Furnished in Statement appended.

(SRI H. M. CHANNABASAPPA)

STATEMENT

Showing the Minor Irrigation and Lift Irrigation Works surveyed and plans and estimates prepared and the number of such works taken up for execution in Gulbarga District.

Sl. No.	Name of Taluka	Number of M. I. and L.I. works for which surveys has been completed and plans and estimates prepared.			The number of such works taken up for execution.		
		M. I. works.	L. I. Schemes	Total	M. I. works.	L. I. Schemes	Total
1	Gulbarga	16	4	20	11	4	15
2	Chincholi	15	3	18	13	3	16
3	Chitapur	6	5	11	5	4	9
4	Alland	5	2	7	5	2	7
5	Afzalpur	1	9	10	1	9	10
6	Yadgir	13	5	18	12	3	15
7	Sedam	9	1	10	8	1	9
8	Shorapur	3	...	3	2	...	2
9	Shahapur	3	7	10	...	2	2
10	Jewargi	3	4	7	3	4	7
	Grand Total for Gulbarga District.	74	40	114	60	32	92

ಶ್ರೀ ಬಾಪುಗೌಡ ರಾಯಪ್ಪ.—ಸ್ವಾಮಿ ನನ್ನ ಪ್ರಶ್ನೆಗೆ ತಾವು ಕೊಟ್ಟಿರತಕ್ಕ ಉತ್ತರದಲ್ಲಿ 74 ನೀರಾವರಿ ಯೋಜನೆಗಳು ಎಸ್ಟಿಮೇಟ್ ಆಗಿವೆ, ಅದರಲ್ಲಿ 60 ಯೋಜನೆಗಳನ್ನು ತೆಗೆದುಕೊಂಡಿದ್ದೀರಿ, ಲಿಫ್ಟ್ ಇರಿಗೇಷನ್‌ನಲ್ಲಿ 40 ಎಸ್ಟಿಮೇಟ್ ಆಗಿವೆ. 32 ಯೋಜನೆಗಳನ್ನು ತೆಗೆದುಕೊಂಡಿದ್ದೀರಿ, 8 ಯೋಜನೆಗಳನ್ನು ಕೈಬಿಟ್ಟಿದ್ದೀರಿ, ಕಾರಣ ಏನು ? ಕ್ಷಾಮ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಆ ಯೋಜನೆಗಳನ್ನು ತೆಗೆದುಕೊಳ್ಳುತ್ತೀರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ ಕ್ಷಾಮ ಪರಿಸ್ಥಿತಿ ಇರುವುದರಿಂದ 74 ಯೋಜನೆಗಳಲ್ಲಿ 60 ಯೋಜನೆಗಳನ್ನು ತೆಗೆದುಕೊಂಡಿದ್ದೇವೆ. ಮೈನರ್ ಇರಿಗೇಷನ್ ಮತ್ತು ಲಿಫ್ಟ್ ಇರಿಗೇಷನ್‌ನಲ್ಲಿ 40 ಸ್ಕೀಮ್‌ಗಳಲ್ಲಿ 32 ಸ್ಕೀಮುಗಳನ್ನು ತೆಗೆದುಕೊಂಡಿದ್ದೇವೆ. ಬಾಕಿ ಯೋಜನೆಗಳು ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಯೋಗ್ಯ ಎನಿಸಿದರೆ ಅಡ್ಡಿ ಇಲ್ಲ. ಅವು ಯೋಗ್ಯ ಎನಿಸದಿದ್ದರೆ ಸ್ವಲ್ಪ ಕಷ್ಟವಾಗುತ್ತದೆ. ಅವುಗಳನ್ನು ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಬಾಪುಗೌಡ ರಾಯಪ್ಪ.—ಈ 74 ಮತ್ತು 40 ಯೋಜನೆಗಳಿಗೆ ಈಗಾಗಲೇ ಎಸ್ಟಿಮೇಟ್ ಆಗಿದೆ. ಮತ್ತು ಅವುಗಳು ಫೀಸಿಬಲ್ ಇವೆ ಎಂದು ವರದಿ ತಮ್ಮ ಮುಂದೆ ಇದೆ. ತಾವು ಕೇವಲ 60 ಮತ್ತು 30 ಯೋಜನೆಗಳನ್ನು ತೆಗೆದುಕೊಂಡಿದ್ದೀರಿ. ಆದ್ದರಿಂದ ಉಳಿದವುಗಳನ್ನು ಸಹ ಶೀಘ್ರವಾಗಿ ತೆಗೆದುಕೊಳ್ಳುವುದಕ್ಕೆ ಭರವಸೆಯನ್ನು ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಎಷ್ಟು ನೀರಾವರಿ ಯೋಜನೆಗಳು ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಯೋಗ್ಯವೆನಿಸುತ್ತವೆ, ಅವುಗಳನ್ನು ಈ ಸಂಖ್ಯೆಗಿಂತ ಜಾಸ್ತಿ ಇದ್ದರೂ ತೆಗೆದುಕೊಳ್ಳುತ್ತೇವೆ.

ಶ್ರೀ ಜೆ ಎಲ್ ಕಬಾಡಿ.—ಈ ಎಸ್ಟಿಮೇಟ್ ಮಾಡಿಸಿ ಎಷ್ಟು ವರ್ಷಗಳಾದವು ಮತ್ತು ಇವುಗಳು ಫೀಸಿಬಲ್ಲೇ ನಾನ್ ಫಿಸಿಬಲ್ಲೇ ಎನ್ನುವುದನ್ನು ಕಂಡುಹಿಡಿದಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಕಂಡುಹಿಡಿಯುವುದು ಇಂಜಿನಿಯರುಗಳು ; ನಾನಲ್ಲ. ತಾವು ಕೇಳುವ ಪ್ರಶ್ನೆಯನ್ನು ಇಂತಿ ಥ ಕೇಸುಗಳಲ್ಲಿ ಎಂದು ಹೇಳಿದರೆ ಅದಕ್ಕೆ ಉತ್ತರ ಕೊಡಬಹುದು.

ಶ್ರೀ ಬಾಪುಗೌಡ ರಾಯಪ್ಪ.—ಈ 92 ಯೋಜನೆಗಳನ್ನು ಗುಲ್ಬರ್ಗದಲ್ಲಿ ಎಷ್ಟು ಸಮಯದಲ್ಲಿ ಮುಗಿಸುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಷ್ಟೇ ಅವಧಿಯಲ್ಲಿ ಪೂರ್ತಿಸುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ನೀರಾವರಿ ಯೋಜನೆಗಳಲ್ಲಿ ಒಂದೊಂದು ಸಲ ಬಂಡಿಂಗ್‌ಗೆ ಜಾಗ ಸಿಕ್ಕಿ ಕೆಲಸ ಮಾಡುತ್ತಿದ್ದರೆ, ಕಾಲುವೆಗೆ ಜಾಗ ಸಿಗುತ್ತಾ ಇಲ್ಲ. ಇವೆಲ್ಲ ಕಾರಣಗಳಿಂದ ಇಷ್ಟೇ ಅವಧಿಯಲ್ಲಿ ಪೂರ್ತಿಸುತ್ತೇವೆಂದು ಹೇಳುವುದು ಸ್ವಲ್ಪ ಕಷ್ಟ.

Lift Irrigation Scheme in Biligere Constituency

675. Sri N. S. GURUSIDDAPPA (Biligere).—

Will the Minister for Public Works and Electricity be pleased to state :—

(*a*) the number of lift irrigation schemes proposed to be taken up in Biligere Constituency, Nanjangud Taluk ;

(*b*) the number of lift irrigation schemes in respect of which estimates have been sanctioned ;

(*c*) the number of acres that would come under cultivation after the completion of schemes ;

(*d*) the reasons for not taking up the work till now ;

(*e*) when the works will be commenced ?

Sri H. M. CHANNABASAPPA (Minister for Public Works and Electricity).—

(*a*) Nil.

(*b*) Nil.

(*c*), (*d*) and (*e*) Do not arise in view of reply to clauses (*a*) and (*b*).

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ಲಿಫ್ಟ್ ಇರಿಗೇಷನ್ ಕೊಡಿಸುತ್ತೇವೆ ಎಂದು ಹೇಳಿದ್ದೀರಿ. ಆದರೆ ಬಿಳಿಗೆರೆ ಕ್ಷೇತ್ರದಲ್ಲಿ ಲಿಫ್ಟ್ ಇರಿಗೇಷನ್ ಏಕೆ ಕೊಟ್ಟಿಲ್ಲ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಇದಕ್ಕೆ ನಾವು ಮನಸ್ಸು ಮಾಡುವುದಲ್ಲ ; ಜನರು ಮುಂದೆ ಬರಬೇಕು.